ಮರಿಯನ್ನು ಕಾಗೆ "ಕಟುಂ ಕುಟುಂ" ಎಂದು ತಿನ್ನುವುದು, "ಕಾಗಕ್ಕಾ, ಏನು ತಿನ್ತಾ ಇದೀಯಾ" ಎಂದು ಗುಬ್ಬಿ ಕೇಳಿದಾಗ, "ಸಂತೆಯಿಂದ ತಂದ ಅಡಕೆ ತಿಂತಿದೀನಿ ಗುಬ್ಬಕ್ಕಾ" ಅಂತ ಕಾಗೆ ಹೇಳುವುದು, ಕೊನೆಗೆ ಎಲ್ಲಾ ಮರಿಗಳನ್ನು ತಿಂದ ಕಾಗೆ ಬೆಳಗಾಗುವುದರೊಳಗೆ ಗೂಡಿನಿಂದ ಹಾರಿಹೋಗಿರುವುದು, ಕಾಗೆಯ ಮೋಸವನ್ನು ತಿಳಿದ ಗುಬ್ಬಕ್ಕ ಕಾಗಕ್ಕನಿಗೆ ತಕ್ಕ ಶಾಸ್ತಿ ಮಾಡಬೇಕೆಂದು ಉಪಾಯವನ್ನು ಯೋಚಿಸುವುದು, ಕಾಗಕ್ಕನನ್ನು ಊಟಕ್ಕೆಂದು ಕರೆದು ಬಿಸಿ ಬಿಸಿ ಕೆಂಡವನ್ನು ಪಾತ್ರೆಯಲ್ಲಿ ಹಾಕಿ ಕೊಡುವುದು, ಊಟವೆಂದು ತಿಳಿದ ಕಾಗಕ್ಕ ಅದನ್ನು ನುಂಗಿ ಗಂಟಲು ಸುಟ್ಟುಹೋಗುವುದು – ಹೀಗೆ ಈ ಕಥೆಯನ್ನು ಕೇಳುತ್ತಾ ಕೇಳುತ್ತಾ ಕಾಗೆಯ ಮೋಸಕ್ಕೆ ಕೋಪಗೊಳ್ಳುತ್ತಿದ್ದೆವು. ಜೊತೆಗೆ ಗುಬ್ಬಿಯ ಸ್ಥಿತಿ ಕಂಡು ಮರುಕ ಪಡುತ್ತಿದ್ದೆವು. ಕೊನೆಯಲ್ಲಿ ಗುಬ್ಬಿಯು ಕಾಗೆಗೆ ಬುದ್ಧಿ ಕಲಿಸಿತೆಂದು ಸಂತೋಷ ಪಡುತ್ತಿದ್ದೆವು. ಎಲ್ಲಾದರೂ ಕಾಗೆಯೊಂದನ್ನು ಕಂಡರೆ 'ಇಂಥದೇ ಕಾಗೆಯಲ್ವಾ, ಗುಬ್ಬಚ್ಚಿಯ ಮರಿಗಳನ್ನು ತಿಂದಿದ್ದು?' ಅನ್ನುವ ಪ್ರಶ್ನೆ ಮನದಲ್ಲಿ ಏಳುತ್ತಿತ್ತು. ಇದೇ ಕಥೆಯನ್ನು ಧ್ವನಿಯ ಏರಿಳಿತ ಮಾಡಿ ನಾಟಕೀಯವಾಗಿ ನನ್ನ ಮಕ್ಕಳಿಗೆ ಹೇಳುತ್ತಿದ್ದರೆ ಆಸಕ್ತಿಯಿಂದ ಬೇಸರವಿಲ್ಲದೆ ಪದೇ ಪದೇ ಕೇಳುತ್ತಿದ್ದರು. ಅಂದರೆ ಈ ಕಥೆ ಸಾರ್ವಕಾಲಿಕವಾಗಿ ಮಕ್ಕಳು ಇಷ್ಟಪಡುವ ಕಥೆ ಎಂಬುದಂತೂ ಸಾಬೀತಾಗುತ್ತದೆ. "ಕಾಗೆ ಪುಕ್ಕ, ಗುಬ್ಬಿ ಪುಕ್ಕ" ಎಂಬ ನಾಲಗೆಹೊರಳನ್ನು (ಟಂಗ್ ಟ್ವಿಸ್ಟರ್) ಮಕ್ಕಳ ನಾಲಗೆಯಲ್ಲಿ ಹೊರಳಿಸಿ ಹೊರಳಿಸಿ ಹೇಳಿಸುತ್ತಾ ಅವರು ಆನಂದ ಪಡುವುದನ್ನು ನೋಡಬೇಕು.

